



## ಕುಮ್ಟಿ ಗಿಡಮೂಲಿಕೆ

ಅಳಿವಿನಂಚಿನಲ್ಲಿರುವ ಕುಮ್ಟಿ ಬೀಜದ/ಹಣ್ಣಿನ ಈ ಸಸ್ಯವು ಸುಮಾರು 200 ವರ್ಷಗಳಷ್ಟು ಹಳೆಯದ್ದು ಮತ್ತು ಅಪರೂಪದ್ದು. ವೃಕ್ಷಾವಲಂಬಿ, ಸದೃಢ ಬಳ್ಳಿ ಮಾದರಿಯ ಸಸ್ಯ ಇದಾಗಿದ್ದು, ವೈಜ್ಞಾನಿಕವಾಗಿ ಇದಕ್ಕೆ 'ಗ್ನೆಟಮ್ ಉಲಾ ಬ್ರಾಂಗ್ನ್' ಎಂಬ ಹೆಸರಿದೆ. ಆಹಾರವಾಗಿ ಅಥವಾ ಔಷಧಿಯಾಗಿ ಬಲು ಪ್ರಯೋಜನಕಾರಿಯಾಗಿದ್ದರೂ ಹೆಚ್ಚು ಜನಪ್ರಿಯವಾಗಿಲ್ಲ. ಜಾನಪದ ಆಯುರ್ವೇದ ವೈದ್ಯಕೀಯದಲ್ಲಿ ಬಳಸಲಾಗುತ್ತದೆ.

ಇತ್ತೀಚೆಗೆ ಸಹೋದ್ಯೋಗಿಯೊಬ್ಬರು ಮಹಾರಾಷ್ಟ್ರ ರಾಜ್ಯದ ಅಹ್ಮದ್‌ನಗರ ಜಿಲ್ಲೆಯ ಜುನ್ ಎಂಬಲ್ಲಿ ಇದನ್ನು ಕಂಡು ಫೋಟೊ ಕ್ಲಿಕ್ಕಿಸಿಕೊಂಡರು. ಇದರ ದ್ರಾಕ್ಷಿ/ ಆಲಿವ್ ಆಕಾರ ಹಾಗೂ ಗಾತ್ರದ ಗೊಂಚಲು ಗೊಂಚಲಾದ ಹಣ್ಣುಗಳು ಚಿತ್ತಾಕರ್ಷಕವಾಗಿವೆ. ಹಸುರು ಕಾಯಿಗಳು ಮಾಗಿದಾಗ ಕೆಂಪು ಕಿತ್ತಳೆ ವರ್ಣಕ್ಕೆ ತಿರುಗುತ್ತವೆ. ಹಣ್ಣಿನೊಳಗಿನ ಬೀಜಗಳು ಪೋಷಕಾಂಶಭರಿತವಾಗಿದ್ದು,

## ಅತೀ ಚಿಕ್ಕ ತೆಂಗಿನಕಾಯಿ

ಬರೀ ಕೈಯಿಂದ ತೆಂಗಿನಕಾಯಿ ಒಡೆಯುವುದನ್ನು ನೋಡಿದ್ದೇನೆ. ತಮ್ಮ ಹಣೆಗೆ ಜಪ್ಪಿ ತೆಂಗಿನಕಾಯಿ ಒಡೆಯುವ ವಿಡಿಯೊ ಸಹ ನೋಡಿದ್ದೇನೆ. ಈ ತೆಂಗಿನಕಾಯಿಗಳೆಲ್ಲ ಸಾಮಾನ್ಯವಾಗಿ 400 ಗ್ರಾಂನಿಂದ ಹಿಡಿದು 650 ಗ್ರಾಂ ತೂಕವಿರುತ್ತವೆ. ಅಳತೆಯಲ್ಲಿ ಹೇಳಬೇಕೆಂದರೆ ಸುಮಾರು 5–6 ಇಂಚು ಉದ್ದವಿದ್ದು, 10–13 ಇಂಚು ಸುತ್ತಳತೆ ಹೊಂದಿರುತ್ತವೆ. ಮೊನ್ನೆ ಊರಿಗೆ ಹೋದಾಗ, ಅಣ್ಣ ಅಡುಗೆಗೆ ಕಾಯಿ ಸುಲಿಯುತ್ತಿದ್ದ. ಸುಲಿಯಲೆಂದು ತೆಗೆದುಕೊಂಡಿದ್ದು ಸಾಮಾನ್ಯಗಾತ್ರದ ಕಾಯಿಯೇ ಆಗಿತ್ತು. ಆದರೆ ಸುಲಿದದ್ದು ಬರೀ ಸಿಪ್ಪೆಯಷ್ಟೆ, ಒಳಗೆ ಕಾಯಿಯೇ ಕಾಣಿಸಲಿಲ್ಲ. ನಮಗಿಬ್ಬರಿಗೂ ಒಮ್ಮೆ ಆಶ್ಚರ್ಯವಾಗಿತ್ತು. ಅಂತೂ ಪೂರ್ತಿ ಸಿಪ್ಪೆ ತೆಗೆದು ಹುಡುಕಿದಾಗ ಒಂದು ಚಿಕ್ಕ ಕಾಯಿ ಕಾಣಿಸಿತು. ಸಾಮಾನ್ಯ ತೆಂಗಿನಕಾಯಿಯ ಗಾತ್ರಕ್ಕೆ ಹೋಲಿಸಿದರೆ, ಇದು ನಾನು ನೋಡಿದ ಅತೀ ಚಿಕ್ಕ ಕಾಯಿ ಆಗಿತ್ತು. ಇದು 2.5 ಇಂಚು ಉದ್ದವಿದ್ದು, 3 ಇಂಚಿನ ಸುತ್ತಳತೆಯನ್ನು ಹೊಂದಿದೆ. ಒಂದು ದೊಡ್ಡ ತೊಂಡೆಕಾಯಿಯ ಗಾತ್ರ ಅಷ್ಟೆ. ಇದನ್ನು ಹಾಗೇ ಕಾದಿರಿಸುವ ಆಲೋಚನೆಯಿಂದ ಒಡೆಯಲು ಹೋಗಲಿಲ್ಲ. 'ಅಣ್ಣ, ಇದನ್ನು ಅತ್ತಿಗೆಯ ಕೈಲಿಟ್ಟರೆ ಇಂದು ಉಪವಾಸವೇ ಗತಿ, ಬೇರೆ ಇನ್ನೊಂದು ಕಾಯಿಯನ್ನು ಸುಲಿಯುವುದೇ ವಾಸಿ' ಎಂದು ನಕ್ಕೆ.

–ಆರ್ಕೆ ಆಡುಕಳ







## ಬೊಳಮಾನದೊಡ್ಡಿಯ ಉಬ್ಬುಶಿಲ್ಪ

ರಾಯಚೂರಿನ ನೆಲ ಐತಿಹಾಸಿಕವಾದದ್ದು. ಜಿಲ್ಲೆಯ ತುಂಬಾ ಕೋಟೆ ಕೊತ್ತಲಗಳು, ಇತಿಹಾಸದ ಕುರುಹುಗಳು ಕಾಣಸಿಗುತ್ತವೆ. ರಾಯಚೂರು ನಗರದಿಂದ ಕೂಗಳತೆ ದೂರದಲ್ಲಿರುವ ಬೊಳಮಾನದೊಡ್ಡಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ಮತ್ತು ತಿಮ್ಮಪ್ಪನ ದೇವಸ್ಥಾನದ ಮುಂಚೆಯೇ ಸುಮಾರು ನೂರು ಮೀಟರ್ ಬಲಕ್ಕೆ ಸಾಗಿದರೆ, ಚಿಕ್ಕ ಬೆಟ್ಟವೊಂದು ಕಾಣುತ್ತದೆ. ಅಲ್ಲಿಗೆ ಹೋಗಲು ಕಡಿದಾದ ದಾರಿಯಿದ್ದು, ಅದನ್ನು ಬಳಸಿ ಮುಂದೆ ಸಾಗಿದರೆ ಎರಡು ಅಡಿಯ ದಿಗಂಬರ ರೂಪದಲ್ಲಿಯ ತೀರ್ಥಂಕರರ ಅಥವಾ ಜೈನಮುನಿಯ ಉಬ್ಬುಶಿಲ್ಪ ಕಾಣುತ್ತದೆ. ಉಬ್ಬುಶಿಲ್ಪದ ಎಡ, ಬಲಕ್ಕೆ ಬಹು ಹೆಡೆಯ ಹಾವಿನ ಉಬ್ಬುಶಿಲ್ಪವನ್ನೂ ನೋಡಬಹುದಾಗಿದೆ.

ಬಯಲಲ್ಲಿ ಇರುವ ಈ ವಿಗ್ರಹದ ಸುತ್ತಮುತ್ತ ಯಾವುದೇ ರೀತಿಯ ಇತಿಹಾಸದ ಶಾಸನಗಳು ಕಂಡುಬಂದಿಲ್ಲ. ಸ್ಥಳದಲ್ಲಿ ಆರಾಧನೆ ಮಾಡಿದಂತಹ ಲಕ್ಷಣಗಳು ಹಾಗೂ ಕಟ್ಟಡ, ಮಂಟಪ ಅಥವಾ ದೇವಾಲಯವಿದ್ದಂತಹ ಅವಶೇಷಗಳು ಕಾಣಸಿಗುತ್ತವೆ. ಜೈನರ ಕುರಿತಾಗಿ ಕಥೆಯೊಂದನ್ನು ಅರುಹುವಂತಿರುವ ಈ ಉಬ್ಬುಶಿಲ್ಪವು ಇತಿಹಾಸ ಆಸಕ್ತರ ಮತ್ತು ಸಾರ್ವಜನಿಕರ ಗಮನ ಸೆಳೆದಿದೆ. ಈ ವಿಶೇಷ ಕ್ಷೇತ್ರವು ಸಂಶೋಧನೆಗೆ ಒಳಪಡಬೇಕಿದೆ. ಗತ ಕಾಲದ ಇತಿಹಾಸ ಅನಾವರಣಗೊಳ್ಳಬೇಕಿದೆ.

–ಈರಣ್ಣ ಬೆಂಗಾಲಿ, ರಾಯಚೂರು